ಈ) ಸದ್ಯದಲ್ಲಿ ಯಾವುದೇ ಆಧುನೀಕರಣಗೊಳಿಸುವ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ವಿಷಯ : ಮಂಡ್ಯದಲ್ಲಿ ಕೃಷಿ ಕಾಲೇಜ್ ಸ್ಥಾಪಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೧೧ (೯೪೯)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯದಲ್ಲಿ ಕೃಷಿ ಕಾಲೇಜು ಸ್ಥಾಪಿಸಬೇಕೆಂಬ ಯೋಜನೆ ಹಲವು ವರ್ಷಗಳಿಂದ ಇರುವದು ನಿಜವೆ ?

ಆ) ಮೇಲ್ಕಂಡ ಕಾಲೇಜಿಗಾಗಿ ವಿ. ಸಿ. ಫಾರಂ ಪ್ರದೇಶವನ್ನು ಗುರುತಿಸಲಾಗಿದೆಯೇ ?

ಇ) ಮೇಲ್ಕಂಡ ಕಾಲೇಜನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು

ಆ) ಹೌದು

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :– ಸಹಕಾರ ಸಂಸ್ಥೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 413 (949)

ಡಾ. ಸಂಜಪ್ಪ (ಶ್ರವಣಬೆಳಗೊಳ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಕಾರಿ ಸಂಸ್ಥೆಗಳು ಅಪನತಿ ಹೊಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಹಿಂದಿನ ಸರಕಾರ ಕಾರಣವೆಂದು ಜನ ಹೇಳುತ್ತಿರುವುದು ನಿಜವೇ ?

ಆ) ನ್ಯಾಯ ಬೆಲೆ ಅಂಗಡಿಗಳನ್ನು ಸೊಸೈಟಿಗಳಿಗೆ ಕೊಡದೇ ಪಾರ್ಟಿ ಏಜೆಂಟರಿಗೆ ಕೊಟ್ಟು ಸೊಸೈಟಿಗಳು ಹಾಳಾಗುತ್ತಿರುವುದು ನಿಜವೇ ?

ಇ) ಸಹಕಾರಿ ಆಂದೋಳನ ಸ್ಥಗಿತಗೊಂಡಿರುವುದನ್ನು ಚುರುಕುಗೊಳಿಸಲು ಸರ್ಕಾರ ಯೋಚಿಸಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ (ಸಹಕಾರ ಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ.

ಇ) ಸಹಕಾರಿ ಆಂದೋಳನವು ಸ್ಥಗಿತಗೊಂಡಿರುವುದಿಲ್ಲ. ಅಸ್ವಸ್ಥ ಸಹಕಾರ ಸಂಘಗಳನ್ನು ಬಲಪಡಿಸುವ ದೃಷ್ಟಿಯಿಂದ ಸಹಕಾರ ಸಂಘಗಳಿಗೆ ಪುನರ್ಚೇತನ ಹಾಗೂ ಪುನರುಜ್ಜೀವನ ಯೋಜನೆಯಡಿಯಲ್ಲಿ ಶೇರು ಬಂಡವಾಳ ಹಾಗೂ ಸಹಾಯ ಧನವನ್ನು ಮಂಜೂರ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ : ಸವಣೂರ್ ಪಟ್ಟಣದಲ್ಲಿ ಭೂಸಾರ ಸಂರಕ್ಷಣೆ ಕಛೇರಿ ತೆರೆಯುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 414 (722)

ಶ್ರೀ ಮಂಜುನಾಥ ಸಿ. ಕುನ್ನೂರ (ಹಿಗ್ಗಾಂವ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವಣೂರು ಪಟ್ಟಣದಲ್ಲಿ ಭೂಸಾರ ಸಂರಕ್ಷಣೆ/ಸಹಾಯಕ ನಿರ್ದೇಶಕರವರ ಕಛೇರಿ ತೆರೆಯುವುದು ಸರಕಾರದವರ ಉದ್ದೇಶವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸ ಗಳಲ್ಲಿ ಸದರಿ ಕಛೇರಿ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಸವಣೂರು ಪಟ್ಟಣದಲ್ಲಿ ಹೊಸ ಭೂಸಾರ ಸಂರಕ್ಷಣೆ ಕಛೇರಿಯನ್ನು ತೆರೆಯುವ ಉದ್ದೇಶವಿಲ್ಲ. ಆದರೆ ಈಗ ರಾಣೆಬೆನ್ನೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು(ಭೂಸಾರ ಸಂರಕ್ಷಣೆ) ತುಂಗಭದ್ರಾ ನದಿ ಕಣಿವೆ ಯೋಜನೆ ಇವರ ಕಛೇರಿಯನ್ನು ಸವಣೂರು ಕೇಂದ್ರಸ್ಥಾನಕ್ಕೆ ಸ್ಥಳಾಂತರಿಸುವ ಅಪರ ಕೃಷಿ ನಿರ್ದೇಶಕರು (ಭೂಸಾರ ಸಂರಕ್ಷಣೆ) ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೃಷಿ ನಿರ್ದೇಶಕರೊಂದಿಗೆ ಸಮಾಲೋಚಿಸಲಾಗುತ್ತಿದೆ.

ಆ) ಕೃಷಿ ನಿರ್ದೇಶಕರ ವರದಿ ಬಂದೊಡನೆ ಸರಕಾರವು ಪರಿಶೀಲಿಸುವುದು.

ವಿಷಯ :– ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 415 (721)

ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಎಷ್ಟು ಗಿರಣಿಗಳು ಲಾಭದಾಯಕವಾಗಿ ನಡೆಯುತ್ತಿವೆ?

ಇ) ನಷ್ಟವನ್ನು ಅನುಭವಿಸುತ್ತಿರುವ ನೂಲಿನ ಗಿರಣಿಗಳನ್ನು ಲಾಭದಾಯಕವಾಗಿ ನಡೆಸಲು ಸರಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ. ಪೆಚ್. ಪಾಟೀಲ್ (ಸಹಕಾರ ಸಚಿವರು) :–

ಅ) ನೋಂದಾಯಿಸಿದ್ದು 18
ನಿರ್ಮಾಣವಾದದ್ದು 08
ನಿರ್ಮಾಣ ಹಂತದಲ್ಲಿ 04

ಆ) ಈಗ ಸದ್ಯಕ್ಕೆ ಲಾಭದಲ್ಲಿರುವ ಗಿರಣಿ 01
ಕೂಡಿಬಿದ್ದ ಹಾನಿಯಲ್ಲಿದ್ದು ಲಾಭದಲ್ಲಿರುವ ಗಿರಣಿ 02

ಇ) ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ :–

1) ಗಿರಣಿಗಳ ವಿಸ್ತರಣೆ ಯೋಜನೆಗಾಗಿ ಕೇರು ಹಣ ನೀಡುವುದು.

2) ದುಡಿಯುವ ಬಂಡವಾಳ ನೀಡುವುದು.

3) ಡೀಜಲ್ ಜನರೇಟರ್ ಸೆಟ್ಟುಗಳನ್ನು ಖರೀದಿಸಲು ಧನ ಸಹಾಯ ಒದಗಿಸುವುದು.

4) ಆವಧಿ ಸಾಲ ಸಾಲಗಳನ್ನು ರಿ ಶೆಡ್ಯೂಲ್ ಮಾಡಿಸಲು ಕ್ರಮ ಕೈಗೊಳ್ಳುವುದು.

5) ಆಗಾಗ್ಗೆ ಗಿರಣಿಗಳ ಪ್ರಗತಿಯ ಸಮೀಕ್ಷೆ ನಡೆಸುವುದು.

ವಿಷಯ :– ಧಾರವಾಡ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 416 (720)

ಶ್ರೀ ಮಂಜುನಾಥ ಚಿನ್ನಪ್ಪ ಕುನ್ನೂರ. (ಶಿಗ್ಗಾಂವ) :–

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿರುವ ದೊಡ್ಡ ಪ್ರಮಾಣದ ಸಹಕಾರ ಸಂಘಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಎಷ್ಟು ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯುತ್ತಿವೆ. ಹಾಗೂ ಅವುಗಳ ಲಾಭವೆಷ್ಟು ?